# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 20/2017**

**ದೋ.ಸಾ. :07 ಪ್ರಾ.ಸಾ. : 06**

| | | |
|---|---|---|
| ಸಾಕ್ಷಿಯ ಹೆಸರು | : | ಸಚಿನ್ ರಮೇಶ್ ನಾಯಕ್ |
| ತಂದೆಯ ಹೆಸರು | : | ರಮೇಶ್ ನಾಯಕ್ |
| ವಯಸ್ಸು | : | 36 ವರ್ಷ |
| ಕೆಲಸ | : | ಸೀ ಬರ್ಡ್ ನಲ್ಲಿ ಚಾಲಕ ವೃತ್ತಿ |
| ವಾಸ | : | ಬಾವಿಕೇರಿ, ಅಂಕೋಲ |

**ದಿನಾಂಕಃ 23-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ಹೆಂಡತಿ, ಚಾಸಾ-4 ನನ್ನ ತಾಯಿ, ಚಾಸಾ-14 ನನ್ನ ಮಗ. ಚಾಸಾ-5 ನನ್ನ ತಮ್ಮ, ಚಾಸಾ-6 ನನ್ನ ತಮ್ಮನ ಹೆಂಡತಿ. ನಾನು ಮತ್ತು ನನ್ನ ತಮ್ಮ ಅಂಕೋಲಾದ ಬಾವಿಕೇರಿಯಲ್ಲಿ ಅಕ್ಕಪಕ್ಕದ ಮನೆಯಲ್ಲಿ ವಾಸ ಮಾಡುತ್ತೇವೆ. ನನ್ನ ತಾಯಿ ನನ್ನ ತಮ್ಮನ ಮನೆಯಲ್ಲಿ ವಾಸವಾಗಿರುತ್ತಾರೆ. ಈ ಪ್ರಕರಣದ ಆರೋಪಿ ನನ್ನ ಸ್ನೇಹಿತ. ನಾನು ಕಾರವಾರದ ಸೀ ಬರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದು, ನಾನು ರಾತ್ರಿ ಪಾಳಿಯ ಕೆಲಸಕ್ಕೆ ಹೋದಾಗ, ನನ್ನ ತಾಯಿ ನಮ್ಮ ಮನೆಯಲ್ಲಿ ಬಂದು ಮಲಗುತ್ತಿದ್ದರು. ಆರೋಪಿಯು ನನ್ನ ಸ್ನೇಹಿತನಾಗಿದ್ದರಿಂದ, ನಾನು ಇದ್ದ ಸಮಯದಲ್ಲಿ ಆತ ನಮ್ಮ ಮನೆಗೆ ಬಂದು ಹೋಗುತ್ತಿದ್ದ.

2. ದಿಃ 23-01-2017 ರಂದು ರಾತ್ರಿ 08.00 ಗಂಟೆಗೆ ನಾನು ರಾತ್ರಿ ಪಾಳಿಯ ಕೆಲಸಕ್ಕೆ ಹೋಗಿದ್ದೆ, ಮರುದಿನ ಬೆಳಿಗ್ಗೆ 6.00 ಗಂಟೆಗೆ ನನ್ನ ಹೆಂಡತಿ ನನ್ನ ಮೊಬೈಲಿಗೆ ಕರೆ ಮಾಡಿ, ಹಿಂದಿನ ದಿನ ರಾತ್ರಿ ನಾನು ಮತ್ತು ನನ್ನ ಅತ್ತೆಯವರು ಮತ್ತು ಮಗು ಮನೆಯಲ್ಲಿ ಮಲಗಿದ್ದಾಗ,

ಮಧ್ಯ ರಾತ್ರಿ 01.00 ಗಂಟೆ ಸಮಯದಲ್ಲಿ ಮನೆಯ ಹಿಂದಿನ ಬಾಗಿಲನ್ನು ಯಾರೋ ಬಡಿಯುತ್ತಿದ್ದನ್ನು ಕೇಳಿ, ನಾವು ಎಚ್ಚರಗೊಂಡು ಬಾಗಿಲು ತೆಗೆದು ನೋಡಿದಾಗ, ಬಾಗಿಲು ಬಡಿದ ವ್ಯಕ್ತಿ ನಿಮ್ಮ ಸ್ನೇಹಿತನಾದ ನಾರಾಯಣ ರಾಮಚಂದ್ರ ನಾಯಕ ಆಗಿದ್ದು, ಆತನಿಗೆ ನಾನು 'ನೀನು ಇಷ್ಟು ರಾತ್ರಿಯಲ್ಲಿ ಏಕೆ ನಮ್ಮ ಮನೆಗೆ ಬಂದೆ' ಎಂದು ಕೇಳಿದಾಗ, ಆತ ಒಮ್ಮೆಲೇ ನಮ್ಮ ಮನೆಯ ಒಳಗೆ ನುಗ್ಗಿ ಬಂದು, ನನ್ನನ್ನು ಅಪ್ಪಿಕೊಂಡು, ರೂಮಿನ ಒಳಗೆ ಎಳೆದುಕೊಂಡ ಹೋಗಿ, ರೂಮಿನ ಬಾಗಿಲನ್ನು ಹಾಕಿಕೊಂಡು, 'ನೀನು ನನಗೆ ಬೇಕೆ ಬೇಕು, ನೀನಾಗೆ ಒಪ್ಪಿದರೆ ಸರಿ, ಇಲ್ಲದಿದ್ದರೆ ನಾನು ನಿನ್ನನ್ನು ಬಲಾತ್ಕರಿಸಿಯಾದರೂ ಪಡೆಯದೆ ಬಿಡುವುದಿಲ್ಲ', ಅಂತ ಹೇಳಿ, ನಾನು ಹಾಕಿಕೊಂಡಿದ್ದ ಚೂಡಿದಾರವನ್ನು ಎಳೆಯಲು ಪ್ರಯತ್ನಿಸಿದ ಹಾಗೂ ಚೂಡಿದಾರದ ಒಳಗೆ ಕೈ ಹಾಕಿ, ನಾನು ಹಾಕಿದ ಚಡ್ಡಿಯನ್ನು ಎಳೆಯಲು ನೋಡಿದನು, ಆಗ ನಾನು ಬೊಬ್ಬೆ ಹಾಕಿಕೊಂಡು, ಆತನಿಂದ ತಪ್ಪಿಸಿಕೊಂಡು ಹೊರಗೆ ಓಡಿ ಬಂದು, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡು ಓಡುತ್ತಿದ್ದಾಗ, ಆರೋಪಿಯು ನನ್ನನ್ನು ಹಿಡಿಯಲು ಹಿಂದಿನಿಂದ ಓಡಿ ಬಂದಿದ್ದು, ನಾನು ಬಾಗಿಲು ಹಾಕಿಕೊಳ್ಳದಂತೆ ಹಿಡಿದುಕೊಂಡಿದ್ದು, ಆ ಸಮಯದಲ್ಲಿ ಮನೆಯ ಹಿಂದಿನ ಬಾಗಿಲು ಆರೋಪಿಯ ತಲೆಗೆ ತಾಗಿ, ರಕ್ತ ಬಂದಿರುತ್ತದೆ, ನಂತರ ತಕ್ಷಣ ನಾನು ಆರೋಪಿಯಿಂದ ತಪ್ಪಿಸಿಕೊಂಡು, ಆತನಿಗೆ ಒಳಗೆ ದೂಡಿ, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡೆನು ಹಾಗೂ ಅತ್ತೆಯು ಮನೆಯ ಮುಂದಿನ ಬಾಗಿಲನ್ನು ಹಾಕಿಕೊಂಡರು, ಆ ಸಮಯದಲ್ಲಿ ನಮ್ಮ ಮಗನೂ ಸಹ ಕೂಗಿಕೊಳ್ಳುತ್ತಾ ಓಡಿ ಬಂದನು. ನಾವು ಕೂಗಾಡುವ ಶಬ್ಧ ಕೇಳಿ ಅಕ್ಕಪಕ್ಕದವರು ಹಾಗೂ ಕೇರಿಯ ಜನರು ಬಂದಿದ್ದು, ನಾವು ಅವರಿಗೆ ವಿಷಯ ತಿಳಿಸಿದೆವು, ನಂತರ ನಾವು ಹಾಗೂ ಕೇರಿಯ ಜನರೆಲ್ಲರೂ ಸೇರಿ ಮನೆಯ ಒಳಗೆ ಕೂಡಿ ಹಾಕಿದ್ದ ಆರೋಪಿಯನ್ನು ಹಿಡಿದು ಹೊರಗೆ ಕರೆದುಕೊಂಡು ಬಂದೆವು" ಎಂದು ಹೇಳಿದರು. ನಂತರ ಬೆಳಿಗ್ಗೆ ನಾನು ಕೆಲಸದಿಂದ ಬಂದ ನಂತರ ಚಾಸಾ-1 ರವರು ಮೇಲೆ ಹೇಳಿದ ವಿಷಯ ತಿಳಿಸಿದ್ದು, ನಾನು ನೋಡಿದಾಗ, ಎಲ್ಲರೂ ಸೇರಿ ಆರೋಪಿಯನ್ನು ಹಿಡಿದು ಕೊಂಡಿದ್ದರು. ಆತನ ತಲೆಯ ಹಿಂಬದಿಗೆ ರಕ್ತ ಬರುತ್ತಿತ್ತು. ನಂತರ ಆರೋಪಿಯು ನನ್ನ ಹೆಂಡತಿಗೆ ಲೈಂಗಿಕವಾಗಿ ಬಲಾತ್ಕರಿಸಿದ ಬಗ್ಗೆ ಚಾಸಾ-1 ರವರ ಮೂಲಕ ಆರೋಪಿತನ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ಈ ವಿಷಯದ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ಹಿಡಿದುಕೊಂಡಾಗ ಆತನ ಬಳಿ ಇದ್ದ ವಿವೋ ಕಂಪನಿಯ ಮೊಬೈಲ್ ಕೆಳಗೆ ಬಿದ್ದಿದ್ದು, ಅದನ್ನು ನನ್ನ ತಾಯಿ ಎತ್ತಿಟ್ಟುಕೊಂಡು

ಪೊಲೀಸರು ಬಂದಾಗ ಅದನ್ನು ನೀಡಿರುತ್ತಾರೆ. ಸದರಿ ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ.1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ